# ಸಮಗ್ರ ಒಂಬುಡ್ಸ್ಮನ್ ಯೋಜನೆ 2021ರ ವೈಶಿಷ್ಟ್ಯತೆಗಳು

1. ಯೋಜನೆಯು ಅಸ್ತಿತ್ವದಲ್ಲಿರುವ ಮೂರು ಆರ್‌ಬಿಐ ನ ಒಂಬುಡ್ಸ್ಮನ್ ಯೋಜನೆಗಳನ್ನು ಸಂಯೋಜಿಸುತ್ತದೆ, ಅವುಗಳೆಂದರೆ (i)
(i)ಬ್ಯಾಂಕಿಂಗ್ ಒಂಬುಡ್ಸ್‌ಮನ್ ಯೋಜನೆ, 2006
(ii) ಬ್ಯಾಂಕೇತರ ಹಣಕಾಸು ಸಂಸ್ಥೆಗಳಿಗಾಗಿ ಒಂಬುಡ್ಸ್‌ಮನ್ ಯೋಜನೆ, 2018
(iii) ಡಿಜಿಟಲ್ ವಹಿವಾಟುಗಳಿಗಾಗಿ ಒಂಬುಡ್ಸ್‌ಮನ್ ಯೋಜನೆ, 2019

2. ಇನ್ನು ಮುಂದೆ ದೂರುದಾರರು ಯಾವ ಯೋಜನೆಯಡಿಯಲ್ಲಿ ಒಂಬುಡ್ಸ್ಮನ್ ರಲ್ಲಿ ದೂರನ್ನು ದಾಖಲಿಸಬೇಕು ಎಂಬುದನ್ನು ಚಿಂತಿಸುವ ಅಗತ್ಯವಿರುವುದಿಲ್ಲ.

3. ಯೋಜನೆಯು ಪ್ರತಿ ಒಂಬುಡ್ಸ್ಮನ್ ಕಚೇರಿಯ ನ್ಯಾಯವ್ಯಾಪ್ತಿಯನ್ನು ರದ್ದುಪಡಿಸಿದೆ.

4. ಯೋಜನೆಯ ಪ್ರಕಾರಾ ಕೆಲವು ಪಟ್ಟಿರುವ ಕೆಲವು ನಿಗದಿತ ಸೇವೆಗಳನ್ನು ಹೊರತುಪಡಿಸಿ, ದೂರುದಾರನು ಸೇವೆಗಳಲ್ಲಿ ಕೊರತೆಗಾಗಿ ತನ್ನ ದೂರನ್ನು ದಾಖಲಿಸಬಹುದು.

5. ಯಾವುದೇ ಭಾಷೆಯಲ್ಲಿರುವ ಭೌತಿಕ ಮತ್ತು ಇಮೇಲ್ ದೂರುಗಳ ಆರಂಭಿಕ ಪ್ರಕ್ರಿಯೆಗಾಗಿ ಅಥವಾ ಸ್ವೀಕೃತಿಗಾಗಿ ಕೇಂದ್ರೀಕೃತ ರಶೀತಿ ಮತ್ತು ಪ್ರಕ್ರಿಯಗಳ ಕೇಂದ್ರವನ್ನು ಚಂಡೀಗಢದ ಆರ್‌ಬಿಐನಲ್ಲಿ ರಚಿಸಲಾಗಿದೆ.

6. ದೂರುಗಳನ್ನು **https://cms.rbi.org.in**ನಲ್ಲಿ ಆನ್ಲೈನ್ ಮೂಲಕ ಸಹ ದಾಖಲಿಸುವುದನ್ನು ಮುಂದುವರೆಸಬಹುದು. ಇದಲ್ಲದೆ, ದೂರುಗಳನ್ನು ನಮ್ಮ ಇಮೇಲ್ ವಿಳಾಸ **crpc@rbi.org.in**ಗೆ ಸಲ್ಲಿಸಬಹುದು ಅಥವಾ **ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ, 4ನೆಯ ಮಹಡಿ, ಸೆಕ್ಟರ್ 17, ಚಂಡೀಗಢ- 160017** ವಿಳಾಸಲ್ಲಿರುವ '**ಕೇಂದ್ರೀಕೃತ ರಶೀತಿ ಮತ್ತು ಪ್ರಕ್ರಿಯೆಗಳ ಕೇಂದ್ರ**"ಕ್ಕೆ ಒಂದು ನಿಗದಿತ ಮಾದರಿಯಲ್ಲಿ ಬರೆದು ಕಳಿಸಬಹುದು.

7. ಜೊತೆಗೆ, ಆರ್‌ಬಿಐ ನ ಕುಂದುಕೊರತೆ ಪರಿಹಾರ ವಿಧಾನದ ಪರ್ಯಾಯವಾಗಿ ಮತ್ತು ದೂರುದಾರನು ದೂರನ್ನು ದಾಖಲಿಸಲು ಮಾರ್ಗಸೂಚಿಯಾಗಿ ಮಾಹಿತಿ/ಸ್ಪಷ್ಟೀಕರಣಗಳನ್ನು ಒದಗಿಸಲು **1800 210 2100 ಶುಲ್ಕ ರಹಿತ ಸೇವಾ ಸಂಖ್ಯೆ ಹೊಂದಿರುವ** ಸಂಪರ್ಕ ಕೇಂದ್ರವನ್ನು ಕಾರ್ಯಾಚರಣೆಗೊಳಿಸಿದೆ.

8. ಈ ಯೋಜನೆಯ ಅಡಿಯಲ್ಲಿ, ಆರ್‌ಬಿಐಯ ಗ್ರಾಹಕ ಶಿಕ್ಷಣ ಮತ್ತು ರಕ್ಷಣಾ ಇಲಾಖೆಯ ಕಾರ್ಯನಿರ್ವಾಹಕ ನಿರ್ದೇಶಕರು ಮೇಲ್ಮನವಿ ಪ್ರಾಧಿಕಾರರಾಗಿರುತ್ತಾರೆ.

9. ಯೋಜನೆಯ ನಕಲು ಪ್ರತಿಯು ಆರ್‌ಬಿಐನ ಜಾಲತಾಣದಲ್ಲಿ ಮತ್ತು ಸಿಎಂಎಸ್ ಪೋರ್ಟಲ್(https://cms.rbi.org.in) ನಲ್ಲಿ ಸಹ ಲಭ್ಯವಿರುತ್ತದೆ.

**------------------OO------------------**